**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

**ಸಿ.ಸಿ.ನಂಃ೪೩/೨೦೨೦**

**ಸಿ.ಡಬ್ಲ್ಯೂ–೮  ಪಿ.ಡಬ್ಲ್ಯೂ-೦೨**

| | | |
|---|---|---|
| **ಹೆಸರು** | ಃ | ಭಾಸು ಚವ್ಹಾಣ |
| **ತಂದೆಃಗಂಡ** | ಃ | ಡೊಂಗರು ಚವ್ಹಾಣ |
| **ವಯಸ್ಸು** | ಃ | ೪೫ ವರ್ಷ |
| **ಉದ್ಯೋಗ** | : | ಡಿ.ಎಸ್.ಪಿ. ಕಲಬುರಗಿ |
| **ವಾಸಸ್ಥಳ** | ಃ | ಕಲಬುರಗಿ |

**ದಿನಾಂಕಃ೧೨.೧೧.೨೦೨೪**

**ಸತ್ಯ ಪ್ರತಿಜ್ಞೆಯ ಮೇರೆ ಗೆ**

---

**ಕಲಂ ೨೪೪ ಸಿ.ಆರ್.ಪಿ.ಸಿ. ಅಡಿಯಲ್ಲಿ ಸಾಕ್ಷಿ ವಿಚಾರಣೆ:**

**ಮುಖ್ಯ ವಿಚಾರಣೆ: ಸ.ಸ.ಅ ರವರಿಂದ**

ನಾನು ೨೦೧೫ ರಿಂದ ೨೦೧೭ ವರೆಗೆ ಆಳಂದ ಪೋಲಿಸ ಠಾಣೆಯಲ್ಲಿ ಸಿ.ಪಿ.ಐ. ಆಗಿ ಕಾರ್ಯ ನಿರ್ವಹಿಸಿದ್ದೇನೆ.

ದಿ.೦೪.೦೨.೨೦೧೬ ರಂದು ನಾನು ಬೇರೆ ಪ್ರಕರಣವಾದ ೨೧೭/೨೦೧೫ ರಲ್ಲಿ ತನಿಖೆ ಮಾಡುತ್ತಿರುವಾಗ ಆರೋಪಿ ನಂ. ೧ ಮತ್ತು ೨ ರವರನ್ನು ದಸ್ತಗೀರಿ ಮಾಡಿ ವಿಚಾರಣೆಗೊಳಪಡಿಸಿದಾಗ ಆರೋಪಿತರು ತನ್ನ ಸ್ವಖುಷಿ ಹೇಳಿಕೆ ನೀಡಿದ್ದು, ಅದನ್ನು ಪಡೆದುಕೊಂಡಿರುತ್ತೇನೆ. ಸದರಿ ಹೇಳಿಕೆಯಲ್ಲಿ ಆರೋಪಿತರು ಈ ಪ್ರಕರಣದಲ್ಲೂ ಸಹ ಕಳ್ಳತನ ಮಾಡಿರುವುದಾಗಿ ಹೇಳಿರುತ್ತಾರೆ. ಮತ್ತು ಈ ಪ್ರಕರಣದಲ್ಲಿ ಜಪ್ತಿ ಪಂಚನಾಮೆ ವೇಳೆ ಆರೋಪಿತರು ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಅರ್ಧ ತೊಲೆಯ ಮೂರು ಸುತ್ತುಂಗುರಗಳನ್ನು ಹಾಜರುಪಡಿಸಿದ್ದು ಅದನ್ನು ಪಂಚರ ಸಮಕ್ಷಮ ೧೦.೩೦ ರಿಂದ ೧೨.೦೦ ಗಂಟೆವರೆಗೆ ಜಪ್ತಿಪಂಚನಾಮೆಯನ್ನು ಜರುಗಿಸಿ ಜಪ್ತಿಪಡಿಸಿಕೊಂಡಿರುತ್ತೇನೆ. ಸಾಕ್ಷಿಯು ಜಪ್ತಿಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಪಂಚನಾಮೆಯನ್ನು ನಿಪಿ-೫ ಎಂದು ಸಹಿಯನ್ನು ನಿಪಿ-೫(ಎ) ಎಂದು ಗುರುತಿಸಲಾಯಿತು. ಈ ಪ್ರಕರಣದ ಮುಂದಿನ ತನಿಖೆಗಾಗಿ ಚಾಸಾ-೧೦ ರವರಿಗೆ ಕಡತಗಳನ್ನು ಹಸ್ತಾಂತರಿಸಿರುತ್ತೇನೆ.

**ಮರು ವಿಚಾರಣೆಃ** ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ.